# ಪ್ರಾರ್ಥನೆ


## ಶ್ರೀಕೃಷ್ಣಾಷ್ಟಕದಿಂದ

**ಪೃಥಿವ್ಯಾಂ ತಿಷ್ಠನ್ ಯೋ ಯಮಯತಿ ಮಹೀಂ ವೇದ ನ ಧರಾ**
**ಯಮಿತ್ಯಾದೌ ವೇದೋ ವದತಿ ಜಗತಾಮೀಶಮಮಲಮ್ ।**
**ನಿಯಂತಾರಂ ಧ್ಯೇಯಂ ಮುನಿಸುರನೃಣಾಂ ಮೋಕ್ಷದಮಸೌ**
**ಶರಣ್ಯೋ ಲೋಕೇಶೋ ಮಮ ಭವತು ಕೃಷ್ಣೋಽಕ್ಷಿವಿಷಯಃ ॥ ೧ ॥**

'ಪೃಥಿವಿಯಲ್ಲಿ ನಿಂತು ಯಾರು ಇಡೀ ಪೃಥಿವಿಯನ್ನು ನಿಯಂತ್ರಿಸುವನೋ ಅವನ ಬಗ್ಗೆ ಧರೆಯಲ್ಲಿ ಯಾರೂ ತಿಳಿಯರು' – ಇವೇ ಮೊದಲಾದ ವಾಕ್ಯಗಳಿಂದ ವೇದಗಳು ಕೃಷ್ಣನನ್ನು ಸ್ತುತಿಸುವುವು. ಅವನು ಜಗದೊಡೆಯನು, ಪರಿಶುದ್ಧನು, ಎಲ್ಲವನ್ನೂ ನಿಯಂತ್ರಿಸುವವನು, ಧ್ಯಾನಕ್ಕೆ ವಿಷಯವಾದವನು, ಮುನಿ–ದೇವತೆ–ನರರಿಗೆ ಮೋಕ್ಷವನ್ನು ಕರುಣಿಸುವವನು. ಶರಣು ಹೊಂದಲು ಯೋಗ್ಯನಾದ, ಲೋಕದ ಒಡೆಯನಾದ ಕೃಷ್ಣನು ನನ್ನ ಕಣ್ಣ ಮುಂದೆ ಗೋಚರನಾಗಲಿ.

**ಮಹೇಂದ್ರಾದಿರ್ದೇವೋ ಜಯತಿ ದಿತಿಜಾನ್ ಯಸ್ಯ ಬಲತೋ**
**ನ ಕಸ್ಯ ಸ್ವಾತಂತ್ರ್ಯಂ ಕ್ವಚಿದಪಿ ಕೃತೌ ಯತ್ಕೃತಿಮೃತೇ ।**
**ಕವಿತ್ವಾದೇರ್ಗರ್ವಂ ಪರಿಹರತಿ ಯೋಽಸೌ ವಿಜಯಿನಃ**
**ಶರಣ್ಯೋ ಲೋಕೇಶೋ ಮಮ ಭವತು ಕೃಷ್ಣೋಽಕ್ಷಿವಿಷಯಃ ॥ ೨ ॥**

ಮಹೇಂದ್ರರೇ ಮೊದಲಾದ ದೇವತೆಗಳು ನಿನ್ನ ಬಲದಿಂದ ಅಸುರರನ್ನು ಗೆಲ್ಲುವರು. ನಿನ್ನ ಕಾರ್ಯವಲ್ಲದೆ ಯಾರೂ ತಮ್ಮ ಕೆಲಸಗಳನ್ನು ಮಾಡಲು ಸ್ವತಂತ್ರರಲ್ಲ. ವಿಜಯಿಗಳಾದ ಕವಿಗಳ ಗರ್ವವನ್ನು ಧ್ವಂಸ ಮಾಡುವವನು ನೀನು. ಶರಣು ಹೊಂದಲು ಯೋಗ್ಯನಾದ, ಲೋಕದ ಒಡೆಯನಾದ ಕೃಷ್ಣನು ನನ್ನ ಕಣ್ಣ ಮುಂದೆ ಗೋಚರನಾಗಲಿ.



**ಯದಾ ಧರ್ಮಗ್ಲಾನಿರ್ಭವತಿ ಜಗತಾಂ ಕ್ಷೋಭಕರಣೀ**
**ತದಾ ಲೋಕಸ್ವಾಮೀ ಪ್ರಕಟಿತವಪುಃ ಸೇತುಧೃಗಜಃ ।**
**ಸತಾಂ ಧಾತಾ ಸ್ವಚ್ಛೋ ನಿಗಮಗಣಗೀತೋ ವ್ರಜಪತಿಃ**
**ಶರಣ್ಯೋ ಲೋಕೇಶೋ ಮಮ ಭವತು ಕೃಷ್ಣೋಽಕ್ಷಿವಿಷಯಃ ॥ ೩ ॥**

ಯಾವಾಗ ಜಗತ್ತನ್ನು ಕ್ಷೋಭೆಗೊಳಗಾಗಿಸುವ ಧರ್ಮದ ಅವನತಿಯುಂಟಾಗುವುದೋ ಆಗ ಜಗದೊಡೆಯನಾದ ಭಗವಂತನು ದೇಹಧಾರಿಯಾಗಿ ಪ್ರಕಟಗೊಳ್ಳುವನು. ಋತ, ನಿಯಮಗಳನ್ನು ನಡೆಸುವ, ಜನ್ಮರಹಿತನಾದ, ಪರಿಶುದ್ಧನಾದ, ವೇದಗಳಿಂದ ಸ್ತುತಿಸಲ್ಪಟ್ಟಿರುವ, ಶರಣು ಹೊಂದಲು ಯೋಗ್ಯನಾದ, ಲೋಕದ ಒಡೆಯನಾದ ಕೃಷ್ಣನು ನನ್ನ ಕಣ್ಣ ಮುಂದೆ ಗೋಚರನಾಗಲಿ.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ



**ಆ**ನಂದದ ಒಂದು ಬಾಗಿಲು ಮುಚ್ಚಿದಾಗ, ಇನ್ನೊಂದು ಬಾಗಿಲು ತೆರೆಯುವುದು. ಆದರೆ ನಾವು ಅನೇಕ ವೇಳೆ ಮುಚ್ಚಿದ ಬಾಗಿಲನ್ನೇ ದೀರ್ಘಕಾಲ ನೋಡುತ್ತಿರುತ್ತೇವೆ; ಆದ್ದರಿಂದ ನಮಗಾಗಿ ತೆರೆದ ಇನ್ನೊಂದು ಬಾಗಿಲನ್ನು ನೋಡುವುದೇ ಇಲ್ಲ.

— ಹೆಲೆನ್ ಕೆಲರ್

**ಮೂ**ರು ರೀತಿ ನಾವು ಜ್ಞಾನ ಸಂಪಾದನೆ ಮಾಡಬಹುದು: ಒಂದು, ಮನನದಿಂದ. ಎರಡು, ಅನುಕರಣೆಯಿಂದ – ಇದು ಅತಿ ಸುಲಭ. ಮೂರು, ಅನುಭವದಿಂದ – ಇದು ಅತಿ ಕಠಿಣ.



—ಕನ್‌ಫ್ಯೂಶಿಯಸ್

**ಗು**ರು ಸಮರ್ಥನಾದ ಅಂಬಿಗ;
ಭಗವದ್ ಕೃಪೆ ಸಹಕಾರಿಯಾದ ಗಾಳಿ.
ಇವೆರಡೂ ಇರುವಾಗ ಮನುಷ್ಯನು ಸಂಸಾರ
ಸಾಗರವನ್ನು ದಾಟಲು ಯತ್ನಿಸದಿದ್ದರೆ,
ಆಧ್ಯಾತ್ಮಿಕವಾಗಿ ಅವನು ಸತ್ತಂತೆ.



— ಶ್ರೀಕೃಷ್ಣ

**ಕಾ**ಲವೇ ಜೀವನ. ಅದನ್ನು ಕೊಂಡುಕೊಳ್ಳಲಾಗದು. ಎರವಲು ಪಡೆಯಲಾಗದು. ಕಾಲದ ದುರುಪಯೋಗವೆಂದರೆ ಜೀವನವನ್ನೇ ವ್ಯರ್ಥ ಮಾಡಿಕೊಂಡಂತೆ.



— ಝುರತುಷ್ಟ್ರ